ಕರ್ನಾಟಕ ಸರಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಲಬುರಗಿ ಜಿಲ್ಲೆ ಕಲಬುರಗಿ

(ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಲಬುರಗಿ)

# ಪತ್ರಿಕಾ ಪ್ರಕಟಣೆ

ಸಂಖ್ಯೆ:ಹಿಂವಕಇ/ಸಿಬ್ಬಂದಿ/ಸಿಆರ್-21/2016-17 ದಿನಾಂಕ:17-06-2017

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿನ ಖಾಲಿ ಇರುವ ಅಡುಗೆಯವರು-62, ಅಡುಗೆ ಸಹಾಯಕರು-92 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಈ ಕಛೇರಿಯ ಅಧಿಸೂಚನೆಯ **ಸಂಖ್ಯೆ:ಹಿಂವಕಇ/ಸಿಬ್ಬಂದಿ/ಸಿಆರ್-21/2016-17 ದಿ:20-10-2016ರಲ್ಲಿ** ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಕೊನೆಯ ದಿನಾಂಕ:30-11-2016 ರವರೆಗೆ ಆನ್‌ಲೈನ್‌ರಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಸರ್ಕಾರದ ಅಧೀನ ಕಾರ್ಯದರ್ಶಿಗಳು-1 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು ಇವರ ಸಂಖ್ಯೆ:ಹಿಂವಕ90 ಬಿಇಟಿ 2016(ಭಾಗ-2) ಬೆಂಗಳೂರು ದಿನಾಂಕ:02-06-2017ರ ಪತ್ರದಲ್ಲಿ ತಿಳಿಸಿರುವಂತೆ, ಸದರಿ ಹುದ್ದೆಗಳ ನೇಮಕಾತಿಗಾಗಿ ಈ ಕೆಳಕಂಡ ವೇಳಾ ಪಟ್ಟಿಯಂತೆ ನೇಮಕಾತಿ ಪ್ರಕ್ರಿಯೆ ನಿಗಧಿಪಡಿಸಲಾಗಿದೆ.

| ಹುದ್ದೆಗಳ ವಿವರ | ದಾಖಲಾತಿಗಳ ಪರಿಶಿಲನೆ | | | ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆ | | |
|---|---|---|---|---|---|---|
| | ದಿನಾಂಕ | ವೇಳೆ | ಸ್ಥಳ | ದಿನಾಂಕ | ವೇಳೆ | ಸ್ಥಳ |
| ಅಡುಗೆಯವರು | 22-06-2017 | ಬೆಳಗ್ಗೆ-10 ರಿಂದ ಸಂಜೆ 5.30ರ ವರೆಗೆ | ಡಾ॥ಎಸ್.ಎಮ್ ಪಂಡಿತ ರಂಗಮಂದಿರ ಕಲಬುರಗಿ | 28-06-2017 | ಬೆಳಗ್ಗೆ-10 ರಿಂದ ಸಂಜೆ 5.30ರ ವರೆಗೆ | ಸಮಾಜ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಗುಂಡಗುರ್ತಿ ತಾ॥ಚಿತ್ತಾಪೂರ |
| ಅಡುಗೆ ಸಹಾಯಕರು | 23-06-2017 | ಬೆಳಗ್ಗೆ-10ರಿಂದ ಸಂಜೆ-5.30ರ ವರೆಗೆ | | 29-06-2017 | ಬೆಳಗ್ಗೆ-10 ರಿಂದ ಸಂಜೆ 5.30ರ ವರೆಗೆ | |

ಅರ್ಹ ಅಭ್ಯರ್ಥಿಗಳು ಈ ಕಛೇರಿಯ ಅಧಿಸೂಚನೆ ದಿನಾಂಕ:20-10-2016ರಲ್ಲಿ ಈಗಾಗಲೇ ತಿಳಿಸಿರುವಂತೆ ಕರೆ ಪತ್ರವನ್ನು ಅಧಿಕೃತ ವೆಬ್‌ಸೈಟ್ **http://www.kalaburagi.nic.in/bcm/**ನಲ್ಲಿ ಡೌನ್‌ಲೋಡ ಮಾಡಿಕೊಂಡು ಮೇಲ್ಕಾಣಿಸಿದ ವೇಳಾ ಪಟ್ಟಿಯಂತೆ ದಾಖಲಾತಿ ಪರಿಶೀಲನೆ ಮತ್ತು ಅಡುಗೆ ತಯಾರಿಕೆಯ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯ ಅಧ್ಯಕ್ಷರಾದ ಶ್ರೀ ಉಜ್ವಲ್ ಕುಮಾರ ಘೋಷ್ ಜಿಲ್ಲಾಧಿಕಾರಿಗಳು, ಕಲಬುರಗಿ ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಜಿಲ್ಲಾ ಮಟ್ಟದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ
ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರು/
ಅಡುಗೆ ಸಹಾಯಕರ ಹುದ್ದೆಗಳ ನೇರ ನೇಮಕಾತಿ
ಸಮಿತಿ ಕಲಬುರಗಿ ಜಿಲ್ಲೆ